# ಸಂಪಿಗಿ ತೆನಿಯಂಥ ಹುಡುಗ

೧ ನೆಯ ಚೌಕ:—

ಸಂಪಿಗಿ ತೆನಿಯಂಥ ಹುಡುಗ
ಸಂತ್ಯಾಗ್ಹಾಯ್ದು ಹೋಗ್ತಾನ
ಹಂತೀಲ್ಹೋಗಿ ಕೇಳತೀನ ಹೆಸರ್‌ ।
ನನ್ನ ಕಾಂತನ ರೂಪ ಹೊಂಟಂಗ ಹುಣ್ವಿ ಚಂದರ್‌ ।
ಇವನ ಚಿಂತಿಯೊಳಗ ಜೀವಕಿಲ್ಲ ಸ್ಥಿರಾರ ।
ಕನಸೀನಾಗ ಕಂಡಂಗಾಯ್ತು
ಮನಸೀನಂದು ಹೋಗವೊಲ್ದ
ಹಲಸಂಗಿ ಊರಾಗಿಲ್ಲ ಇವಸ್ಹಂತವರ ॥
ಇಂದ್ರಲೋಕದ ಪುರುಷಾ ಇವ
ಅರಸನ ಹೊಟ್ಟಿಲೆ ಹುಟ್ಯಾನೇನ
ಸರಸ ಕಾಮನಾಟಕ್ಹಾನ ದುರುಳ ।
ಇವನ ತೋಳ ತೊಡಿ ಖ್ಯಾದಿಗಿಹೊಡಿ ಸರಳ್‌ ।
ನನ್ನ ಜೋಡಿ ಹಾನ ನೋಡಿ ಆದೆ ಮರಳ್‌ ।
ಇವನ ರೂಪ ಅಪರೂಪ
ಹಚ್ಚಿದಾಂಗ ಚಂದ್ರದೀಪ
ಏನು ತಿಳಪ ಹೊಟ್ಯಾಗಿನ ಕರಳ್‌
ಕುಂತ್ರ ನಿಂತ್ರ ಇವನ ಧ್ಯಾನ
ಜೀವಕಿಲ್ಲ ಸಮಾಧಾನ
ನಿದ್ದಿ ಇಲ್ಲ ಕಣ್ಣಿಗಿ ಹಗಲಿರಳ್‌
ಇವನ ಹಸ್ತ ಏನ ಸಿಸ್ತ ಮಾವಿನ ತರಳ್‌ ।
ಮ್ಯಾಲ ಕುಂದಲದ ಹರಳ ಉಂಗರೊಪ್ಪ ಬೆರಳ್‌ ।
ಮನಸ ಸೋತ, ನನ್ನಗೂಡ
ಮಾತ ಒಂದೂ ಆಡವೊಲ್ಲ
ಪ್ರೀತಿಯಿಟ್ಟು ನನ್ನ ಮ್ಯಾಲ ಸರಳ್‌ ॥

ಬಿಡಲಾಕಿಲ್ಲ ಖಾವಾಖಾವು
ಹೀಂಗಾದs ನಮ್ಮ ನೇವು
ಎಂದೀಗಿ ಹೋಗದು ಹುಸಿ ।
ಯುಶೋದಾಬಾಯಿ ನಮ್ಮ ತಾಯಿ–
ಆಕೀಗಿ ನೀವು ಆಗಿನಡೀರಿ ಸೊಸಿ

ಗೌಳಗಿತ್ತೀ ಕೇಳs ಸುಂಕ
ಕೊಟ್ಟು ಹೋಗ ನಮ್ಮ ಹಕ್ಕ
ಸೋರೀ ಒಡೆದರ ಆದೀತ ಮುಕ್ಕ
ಅಬ್ರೂ ಕಳದರ ಆದೀ ಪಿಕ್ಕಾ
ಇದರಾಗಾದ ಏನು ಸುಖ
ನಮ್ಮ ನಿಮ್ಮದಾಗಲಿ ಖುಷಿ ।
ಸಿಟ್ಟೀಗಿ ಬಂದು ಚಟ್ಟೀಗಿ ಒಡೆದರ–
ಅಲ್ಲಿಂದ ಮುಟ್ಟಿತs ಬಿಸಿ ॥

ಹನ್ನೆರಡು ವರ್ಷಾಯ್ತು ಒದ್ದ
ಹಾಸೀಸ ಮಗ್ಗಾಲನಾ ಇದ್ದ
ಸಂತೀ ಮಾಡತೀರಿ ಕದ್ದ
ಹೋಗತೀರಿ ಹೋಳಬಿದ್ದ
ನಾನು ಭಾಳ ಜಪ್ಪಿಸಿ ।
ಮನಸಿಟ್ಟು ಹಾಕಿದೆನು ಗಂಟ ನಾ–
ನಿಮಗ ಹಿಡದ ಜಪ್ಪಿಸಿ ॥

ಕೈಯ ಮಾಡಿ ಕೃಷ್ಣ ಕರೆದು ।
ಗೋಪಾಳ್ರೆಲ್ಲಾ ಬಂದು ನೆರೆದು ।
ಗಡಿಗಿ ಒಡದ್ರು ಗೌಳಗೇರದು ।
ಹಾಲಮೊಸರಾ ಹೋಗೂದು ಹರದು ।
ನುಚ್ಚ ರೊಟ್ಟಿ ಮುರಮುರದು ।

೨ ನೆಯ ಚೌಕ—

ಯಾಕೋ ಗಂಡುಳ್ಳ ಬಾಲೇರಿಗಿ ಹಟ್ಟಕ್
ಕೇಳತಿ ಕೀಟ್ಟಕ್
ಅವನ ವ್ಯಾಲೆ ಚಟ್ಟಕ್
ಮುರದಾಳ ಬಟ್ಟಾ ।
ನನ್ನ ಪುರಷಹಾನ ದುರುಷ ಖಾಲೆ ಇರಸ ಬೆಳಸಬ್ಯಾಡ ತಂಟಾ ।
ನನ್ನ ಸೋದರ ಮಾವ ಕೆಟ್ಟಾಂವಾ ನಿನ್ನ ಜೀವ ಮಾಡ್ಯಾನು ಚಟ್ಟಾ ।
ನಿನ್ನ ಮನದಾಗ ನೋಡೊ ತಿಳಿಸ್ದ-
ಕಾಲ್ಹಿಡದೆಳಸ್ದ ಕಿತ್ತ್ಯಾರೊ ಜುಟ್ಟಾ ॥
ಕಂಪಕಂಡಲ್ಲಿ ತರಬತಿ ಸಂದ್ಯಾಗ
ಮಾನ ಕಳದೀ ಮುಂದ್ಯಾಗ
ಹಾಕಸೇನು ಬಂದ್ಯಾಗ
ಇದ್ದೀ ಮುರಸೋಟ ।
ಖಾಲೆ ಭಂಡಮಾಡಿ ದಂಡಕೊಟ್ಟೀ ಹೋಂಡ ಇದ್ದಿ ಅಡಮುಟ್ಟಾ ।
ಈ ಸರಕಾರೊಂದು ಪರಕಾರಾಡ ಕಾಣಸ್ಯಾರು ತುರಂಗಘಾಟ ।
ನಿನಗ ಬೇಡಿ ಹಾಕಸೇನು ಒಯ್ದು-
ಅಲ್ಲಿಂದ ಕೈಸ್ದ ಭೋಗಸುದು ಕಷ್ಟಾ ॥
ಭಾಳ ಕೆಟ್ಟಾದ ಹೆಣ್ಣಿನ ಇರಸ
ಲಂಕಾಸ್ದರಸ
ಮಂಡೋದರಿ ಪುರುಷ
ರಾವಣ ದುಷ್ಟಾ ।
ಮೈಗಿ ಬೂದಿ ಧರಿಸಿ ಸಾಧೂ ಆಗಿ ಸನ್ನ್ಯಾಸಿ ರೂಪ ತೊಟ್ಟಾ ।
ಅಂವಾ ಕಪಟದಿಂದ ಹೋದ ಅಲ್ಲಿ ಸೀತಾನ ಬಲ್ಲಿ ಬೇಡಿದಾ ಹಿಟ್ಟಾ ।
ಮಂಡಲದೊಳಗಿದ್ದರೇನು ಅವಗ ಕಿಮ್ಮತ್-
ಹೊರಗ ಒರೂಸ ಮಾತ ಎತ್ತಗೊಂಡು ಹೊಂಟಾ ॥
ಸೀತಾನ ಸಲುವಾಗಿ ಲಂಕಾ ಸುಟ್ಟ ಮಾರುತಿ-
ಮಾರುತಿ ।

ಭಾಳಮಂದಿ ಮಡೀತೋ ಮುಣಗಿ ಹೋಯ್ತು ಸಂಪತಿ-
ಸಂಪsತಿ ।
ಕೌರವನ ಹೊಡಿಸಿಬಿಟ್ಟ್ಯಾಳ ಪಾಂಡವರ ದ್ರೌಪsತಿ-
ದ್ರೌಪತಿ ।
ಭೀಮಸೇನಸ್ದು ಇತ್ತು ಒಳೆ ಧಸsಕ
ತುಳದಾನ ಕಚsಕ
ಆವಾಗ ಕೀಚsಕ
ಸೊಕ್ಕ ಮುರದು ಸತ್ತಾ ।
ಈ ಹೆಣ್ಣಿಗಾಗಿ ಮಣ್ಣಗೂಡಿ ಮುಣಗಿ ಹೋಗ್ಯಾವ ದೌಲತ್ತಾ ।
ಶ್ರೀ ಸಾನಿಧಪ ಪದಸಿಸ ಸರಿಗಮ ನಾರಿ ನಿನ್ನ ಗತ್ತಾ ।
ನಮ್ಮ ಕಂಡು ಹೋಗಬ್ಯಾಡ ಚದsರಿ
ಓಡಿದಾಗ ಬೆದsರಿ
ಕಾರ್ಯ್ಯಣ್ಣಾವಿ ಎತ್ತಾ ॥

೩ನೆಯ ಚೌಕ:—

ಪೋರಿ ಹೇಳಬ್ಯಾಡ ನನಗೊಂದು ಅಕಲಾ
ಕೃಷ್ಣsನ ಗೋಕುsಲ
ಒಳಗಿನ ದಾಖsಲ
ಕೇಳ ಶ್ಯಾsಣ್ಯಾರಿಗಿ ।
ಆ ಶ್ರೀಹರಿ ಶರಾಸೂರಿ ಮಾಡಿದಾ ಗೌಳಗೆರಿಗಿ ।
ಅಂವಾ ಹದಿನಾರು ಸಾವಿರ ಭೋಗಿಸಿದಾ ಗೋಪ್ಯಾರಿಗಿ ।
ನೀ ತಗೀ ಬ್ಯಾಡ ಖಾಲೇ ಕುಸsಲ-
ಮಾತಿನ ಹಾಸsಲ ಕೇಳs ತುಸು ತಿರಗಿ ॥
ನಿನ್ನ ಮಾವಂದು ಇಟ್ಟಿದಿ ಹಿಮ್ಮತ
ಅವಂದೇನು ಕಿಮ್ಮsತ್ತ
ಮಾಡೂನು ಬಾ ಗಮ್ಮsತ್ತ
ಇಂದ ರಾತರಿಗಿ ।

